# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | (2270) 229 |
| **ಸದಸ್ಯರ ಹೆಸರು** | : | ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | : | 26-03-2026 |
| **ಉತ್ತರಿಸಬೇಕಾದ ಸಚಿವರು** | : | ಉಪ ಮುಖ್ಯಮಂತ್ರಿಯವರು |

* * * * *

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| **ಅ)** | GBA ವ್ಯಾಪ್ತಿಯಲ್ಲಿ ಅಂತರ್ಜಲದ ಸ್ಥಿತಿಗತಿಗಳೇನು; ಇದರ ಮಟ್ಟವನ್ನು ಯಾವಾಗಿನಿಂದ ಅಳೆಯಲಾಗುತ್ತಿದೆ; (ಅಂಕಿ ಅಂಶಗಳ ಮತ್ತು graph ನೊಂದಿಗೆ ವರ್ಷವಾರು ಮಾಹಿತಿ ಒದಗಿಸುವುದು) | • ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಈ ಹಿಂದಿನ ಬಿ.ಬಿ.ಎಂ.ಪಿ (ಹಾಲಿ ಜಿ.ಬಿ.ಎ) ವ್ಯಾಪ್ತಿಯಲ್ಲಿ ಇರುವ ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟವನ್ನು ತಿಳಿಯಲು 2025 ರಿಂದ IoT (Internet of Things) ಮಾಪಕವನ್ನು ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br>• ಮುಂದುವರೆದು, ಭಾರತೀಯ ವಿಜ್ಞಾನ ಸಂಸ್ಥೆಯ ಕೇಂದ್ರ ಅಂತರ್ಜಲ ಮಂಡಳಿ, ಕರ್ನಾಟಕ ಅಂತರ್ಜಲ ನಿರ್ದೇಶನಾಲಯ ಹಾಗೂ ಬೆಂಗಳೂರು ಜಲಮಂಡಳಿಯ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಅಂತರ್ಜಲ ಮಟ್ಟದ ಬಗ್ಗೆ ಅಧ್ಯಯನ ಮಾಡಲಾಗುತ್ತಿದೆ. |
| **ಆ)** | ಬೆಂಗಳೂರಿನಲ್ಲಿ ಅಂತರ್ಜಲದ ಕುಸಿಯುವಿಕೆಯನ್ನು ತಡೆಗಟ್ಟಲು ಯಾವ ಕ್ರಮಗಳನ್ನು ಎಂದಿನಿಂದ ಕೈಗೊಳ್ಳಲಾಗುತ್ತಿದೆ; ಇದರ ಫಲಿತಾಂಶಗಳೇನು; | • The Bangalore Water Supply and Sewerage (Amendment) Act, 2011 ರನ್ವಯ ದಿನಾಂಕ: 05.02.2011 ರಿಂದ ಮಳೆ ನೀರು ಕೊಯ್ಲು ಘಟಕವನ್ನು ಕಡ್ಡಾಯ ಮಾಡಲಾಗಿರುತ್ತದೆ.<br>• ಅಂತರ್ಜಲವನ್ನು ಸಂರಕ್ಷಿಸಲು ಕೊಳವೆ ಬಾವಿಯ ಸುತ್ತಲು ಮಳೆ ನೀರು ಕೊಯ್ಲು ಘಟಕಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.<br>• ಅಂತರ್ಜಲವನ್ನು ಸಂರಕ್ಷಿಸಲು ತ್ಯಾಜ್ಯ ನೀರು ಸಂಸ್ಕರಣ ಘಟಕಗಳಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಈಗಾಗಲೇ 20 ಕೆರೆಗಳಿಗೆ ತುಂಬಿಸಲಾಗಿದೆ.<br>• 37 ಕೆರೆಗಳಿಗೆ ಸಂಸ್ಕರಿಸಿದ ತ್ಯಾಜ್ಯ ನೀರನ್ನು ತುಂಬಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, 19 ಕೆರೆಗಳಿಗೆ ಸಂಸ್ಕರಿಸಿದ ತ್ಯಾಜ್ಯ ನೀರನ್ನು ತುಂಬಿಸುವ ಯೋಜನೆಯನ್ನು ರೂಪಿಸಲಾಗಿದೆ. |

| | | |
|---|---|---|
| ಇ) | Gated community ಮತ್ತು ವಸತಿ ಸಂಕೀರ್ಣಗಳಲ್ಲಿ ಸಂಸ್ಕರಿತ ತ್ಯಾಜ್ಯ ನೀರನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ; (ವಿವರ ಒದಗಿಸುವುದು) | ಬೆಂಗಳೂರಿನಲ್ಲಿರುವ ಅನೇಕ ಗೇಟೆಡ್ ಸಮುದಾಯಗಳು ಮತ್ತು ಸಂಕೀರ್ಣಗಳಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಸಾಮಾನ್ಯವಾಗಿ ಗೃಹಬಳಕೆಗೆ ಹೊರತುಪಡಿಸಿ, ಶೌಚಾಲಯಗಳಲ್ಲಿ ಫ್ಲಶಿಂಗ್‌ಗಾಗಿ, ಉದ್ಯಾನವನಗಳ ನಿರ್ವಹಣೆಗಾಗಿ, ವಾಹನ ಸ್ವಚ್ಛಗೊಳಿಸುವಿಕೆಗಾಗಿ, ತೆರೆದ ಆವರಣ ಶುಚಿಗೊಳಿಸುವಿಕೆಗಾಗಿ ಬಳಸಲಾಗುತ್ತಿದೆ ಮತ್ತು ವಾಣಿಜ್ಯ ಕಟ್ಟಡಗಳಲ್ಲಿ ಕೂಲಿಂಗ್ ಟವರ್ ಗಳಲ್ಲಿ ಉಪಯೋಗಿಸಲು ಮರುಬಳಕೆ ಮಾಡಲಾಗುತ್ತಿರುತ್ತದೆ. |
| ಈ) | ವಸತಿ ಸಂಕೀರ್ಣಗಳಲ್ಲಿ ತ್ಯಾಜ್ಯ ನೀರಿನ ಸಂಸ್ಕರಣೆಯನ್ನು ಕುಡಿಯುವ ನೀರಿನ ಹಂತದ ಮಟ್ಟಿಗೆ ಸಂಸ್ಕರಿಸುವುದು ಕಡ್ಡಾಯಗೊಳಿಸಲು ಸಾಧ್ಯವಿದೆಯೇ; ಇದನ್ನು ಸಾಧಿಸಲು 5 ವರ್ಷಗಳವರೆಗೆ ಹಂತ ಹಂತವಾಗಿ ಸಂಪೂರ್ಣ ಗುರಿ ಮುಟ್ಟುವಿಕೆಗೆ ಸರ್ಕಾರ ಕ್ರಮ ಕೈಗೊಳ್ಳುವುದೇ; ಇಲ್ಲದಿದ್ದಲ್ಲಿ ಕಾರಣಗಳೇನು? | ಪ್ರಸ್ತುತ, ವಸತಿ ಸಂಕೀರ್ಣಗಳಲ್ಲಿ ಕುಡಿಯುವ ನೀರಿನ ಮಾನದಂಡಗಳಿಗೆ ಅನುಗುಣವಾಗಿ ತ್ಯಾಜ್ಯ ನೀರನ್ನು ಸಂಸ್ಕರಿಸುವುದನ್ನು ಕಡ್ಡಾಯಗೊಳಿಸಲು ಸಾಧ್ಯವಿರುವುದಿಲ್ಲ. |

**ಸಂಖ್ಯೆ:** ನಅಇ 122 ಎಂಎಸ್ಐ 2026(ಇ)

(ಡಿ ಕೆ ಶಿವಕುಮಾರ್)
ಉಪ ಮುಖ್ಯಮಂತ್ರಿ